ಗುರುತಿಸಿರುವ ಕಳ್ಳಭಟ್ಟಿ ಕೇಂದ್ರಗಳ ಮೇಲೆ ನಿರಂತರ ದಾಳಿ ಕಾರ್ಯಗಳನ್ನು ನಡೆಸಲಾಗುತ್ತಿದೆ.

349 (172) ಶ್ರೀ ಸಿದ್ದು ಸವದಿ (ತೆರದಾಳ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಕಾನೂನನ್ನು ಜಾರಿಗೆ ತರಲಾಗಿದೆಯೆ; ಇಲ್ಲವಾದಲ್ಲಿ, ಕಾರಣಗಳೇನು;

ಆ) ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಎಷ್ಟು; ಈ ಮಕ್ಕಳನ್ನು ಶಾಲೆಗೆ ಸೇರಿಸುವ ಬಗ್ಗೆ ಇವರ ಕಾರ್ಯಕ್ರಮಗಳೇನು;

ಇ) ಬಹುತೇಕ ಯೋಜನೆಗಳು ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಏನು ಕ್ರಮ ಜರುಗಿಸಲಾಗಿದೆ;

ಈ) ಯಾವ ಯಾವ ಯೋಜನೆಗಳಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ (ವಿವರವನ್ನು ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಕಾನೂನನ್ನು ಜಾರಿಗೆ ತರಲಾಗಿದೆ.

ಆ) 2009–10 ನೇ ಸಾಲಿನಲ್ಲಿ ರಾಜ್ಯದಲ್ಲಿ 7 ರಿಂದ 14 ವಯಸ್ಸಿನ ಒಟ್ಟು 35637 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗಿದೆ. ಸದರಿ ಮಕ್ಕಳನ್ನು ಶಾಲಾ ವಾತಾವರಣಕ್ಕೆ (ಮುಖ್ಯವಾಹಿನಿಗೆ) ಸೇರಿಸಲು ಸರ್ವ ಶಿಕ್ಷಣ ಅಭಿಯಾನದಿಂದ ಈ ಕೆಳಗೆ ನಮೂದಿಸಿರುವ ಸೇತುಬಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. 2 ತಿಂಗಳ ಚಿಣ್ಣರ ಅಂಗಳ (ವಸತಿಸಹಿತ)
2. 2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)
3. 12 ತಿಂಗಳ ವಸತಿಸಹಿತ ಸೇತುಬಂಧ ಕಾರ್ಯಕ್ರಮ
   - ✓ 12 ತಿಂಗಳ ವಸತಿಯುತ ಸೇತುಬಂಧ
   - ✓ ಆಶಾಕಿರಣ

4. 12 ತಿಂಗಳ ವಸತಿರಹಿತ ಕಾರ್ಯಕ್ರಮ
   - ✓ ಪೂರಕ ಶಾಲೆ
   - ✓ ಸಾರಿಗೆ ಸೌಲಭ್ಯ
   - ✓ 12 ತಿಂಗಳ ವಸತಿರಹಿತ ಸೇತುಬಂಧ
5. ಟೆಂಟ್ ಶಾಲೆ
6. ಸಂಚಾರಿ ಶಾಲೆ
7. 6 ತಿಂಗಳ ಋತುಮಾನ ವಸತಿಯುತ ಸೇತುಬಂಧ ಕೇಂದ್ರ
8. ವಿಶೇಷ ದಾಖಿಲಾತಿ ಆಂದೋಲನ.

1. ಎನ್.ಸಿ.ಎಲ್.ಪಿ
2. ಮದರಸ
3. ಗೃಹಾಧಾರಿತ ಶಿಕ್ಷಣ
4. ಕೆ.ಜಿ.ಬಿ.ವಿ

ಇ) ಇಲ್ಲ.

ಈ) ಸರ್ವ ಶಿಕ್ಷಣ ಅಭಿಯಾನದಿಂದ ನಡೆಸಲಾಗುತ್ತಿರುವ ಕೆಳಕಂಡ ಕಾರ್ಯತಂತ್ರಗಳ ಮೂಲಕ 2009–10 ನೇ ಸಾಲಿನಲ್ಲಿ ಒಟ್ಟು 35553 ಮಕ್ಕಳನ್ನು ಸೇರಿಸಲಾಗಿದ್ದು, ಸದರಿ ಮಕ್ಕಳನ್ನು ಮಾರ್ಚ್ 2010ರ ಒಳಗೆ ಮುಖ್ಯವಾಹಿನಿಗೆ ಸೇರಿಸಲು ಕ್ರಮ ವಹಿಸಲಾಗಿದೆ.

ಕಾರ್ಯತಂತ್ರವಾರು ಮಕ್ಕಳ ಸಂಖ್ಯೆ ನಮೂದಿಸಿದೆ.

ಕ್ರ.ಸಂ.	ಕಾರ್ಯತಂತ್ರಗಳು	ಮಕ್ಕಳ ಸಂಖ್ಯೆ
1.	2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)	4319
2.	2 ತಿಂಗಳ ಚಿಣ್ಣರ ಅಂಗಳ (ವಸತಿರಹಿತ)	6308
3.	12 ತಿಂಗಳ ವಸತಿರಹಿತ ಸೇತುಬಂಧ	2964
4.	ಪೂರಕ ಶಾಲೆ	665

5.	ಸಾರಿಗೆ ಸೌಲಭ್ಯ	643
6.	12 ತಿಂಗಳ ವಸತಿರಹಿತ ಸೇತುಬಂಧ	836
7.	ಟೆಂಟ್ ಶಾಲೆ	1204
8.	ಸಂಚಾರಿ ಶಾಲೆ	423
9.	ವಿಶೇಷ ದಾಖಲಾತಿ ಆಂದೋಲನ	9365
10.	ಎನ್.ಸಿ.ಎಲ್.ಪಿ	963
11.	ಮದರಸ	3722
12.	ಗೃಹಾಧಾರಿತ ಈಶಕ್ಷಣ	2666
13.	ಕೆ.ಜಿ.ಬಿ.ವಿ	1475
	ಒಟ್ಟು	35553

ತೇರದಾಳ ಕ್ಷೇತ್ರದಲ್ಲಿ 5 ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ

350 (173) ಶ್ರೀ ಸಿದ್ದುಸವದಿ (ತೇರದಾಳ್) : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದಲ್ಲಿ 5 ದೊಡ್ಡ ಗ್ರಾಮಗಳಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹಿಪ್ಪರಗಿ, ಚಿಮ್ಮಡ, ಕುಲ್ಹಳ್ಳಿ, ಜಗದಾಳ ಮತ್ತು ಢವಳೇಶ್ವರಗಳಲ್ಲಿ ಎಂದು ಕಾಲೇಜನ್ನು ಪ್ರಾರಂಭಿಸಲಾಗುವುದು;

ಇ) ಕಾಲೇಜನ್ನು ಪಾರಂಭಿಸಲು ಮಕ್ಕಳ ಸಂಖ್ಯೆಯನ್ನು ಪರಿಗಣಿಸಲಾಗುವುದಿಲ್ಲವೇ; ಹಾಗಿದ್ದಲ್ಲಿ, 25ಕ್ಕಿಂತ ಕಡಿಮೆ ಮಕ್ಕಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳು ಎಷ್ಟು ರಾಜ್ಯದಲ್ಲಿ 50 ಮಕ್ಕಳಿಗಿಂತ ಕಡಿಮೆ ಇರುವ ಕಾಲೇಜುಗಳು ಎಷ್ಟು;

ಈ) ಈ ರೀತಿ ಕಡಿಮೆ ಇರುವ ಕಾಲೇಜುಗಳನ್ನಾದರೂ ವರ್ಗಾಯಿಸಿ ನಮ್ಮಲ್ಲಿ ಪ್ರಾರಂಭಿಸಲಾಗುವುದೆ?